ಚೂರು ಚೂರಾಗಿ ಕಿತ್ತುಹಾಕುತ್ತ... ಮುಖ ಗಂಟು ಬಿತ್ತು.

ನೆನಪು ಕಡಿಯುತ್ತದೆ.. ತುರಿಸಿಕೊಳ್ಳುತ್ತಾಳೆ. ಅಷ್ಟು ಸಾಪಾಗಿ ನೇರವಾಗಿಲ್ಲದ ತನ್ನ ಬಾಳನ್ನು (ಹಾಗೆಂದು ಅಮ್ಮನ ಭಾವನೆ) ತಿದ್ದುತ್ತೇನೆಂದು ಅಮ್ಮ ಹೊರಟದ್ದು ಅವಳ ಭ್ರಮೆಯಲ್ಲವೇ? ಗಟ್ಟಿ ಮಾಡುತ್ತೇನೆಂಬ ನಂಬಿಕೆ. ನಿಜಕ್ಕೂ ಟೊಳ್ಳಾಗಿದೆಯೇ? ಗೆದ್ದಲು ಹತ್ತಿ ನುಸಿ ಹಿಡಿದಿದ್ದರೆ? ಹೊಸದನ್ನೇ ಕಟ್ಟಿಕೊಡುತ್ತೇನೆಂಬ ಸಾಹಸವೋ ಏನೋ. ಎಲ್ಲವೂ ಸುಭದ್ರವಾಗಿ ಸುಖವಾಗಿರಬೇಕೆಂದು ಅಮ್ಮನ ನಿತ್ಯ ಹಳಹಳಿಕೆ. ಮಗಳ ಬಾಳು ನೇರ್ಪಡಿಸುವ ಕನವರಿಕೆಯ ದುಸ್ಸಾಹಸ ಅವಳದು !

ಹಳೆಯದನ್ನು ನೆನಸಿಕೊಳ್ಳಲು ಅವಳಿಗೆ ಅಂಥ ಆಸೆ, ಆಸಕ್ತಿಗಳೇನೂ ಇರಲಿಲ್ಲ. ಚಿಕ್ಕವಳಿದ್ದಾಗಿನಿಂದಲೂ ಮುಂದೆ ಹೀಗಿರಬೇಕು, ಇದೇ ದಾರಿಯಲ್ಲಿ ನಡೆದು ಇಂಥ ಗುರಿಯೇ ಸಾಧಿಸಬೇಕು ಇತ್ಯಾದಿಗಳ ಚಿತ್ರ, ಕಲ್ಪನೆಗಳನ್ನು ಅಡೆ ಹಾಕಿಟ್ಟುಕೊಂಡಿರಲಿಲ್ಲ. ತಟ್ಟನೆ ಪಿಚಕಾರಿಯಂತೆ ನಗು ಧುಮುಕುತ್ತದೆ. ಅವಳ ಥಿಯರಿಯೇ ಬೇರೆ.

'ನೋ..ನಾಟ್ ಎಟಾಲ್...ಅದರಲ್ಲೇನು ಲೈಫ್ ಇರತ್ತೆ? ಮೊದಲೇ ಗೊತ್ತಾದ ಅಚ್ಚಿನಲ್ಲಿ ಬದುಕನ್ನು ಹೊಯ್ದುಕೊಂಡು ಹೋದರೆ, ಒಂದೇ ಎರಕದ ಪಾತ್ರದಲ್ಲಿ ಹರಿಯುತ್ತ ಹೋಗೋದ್ರಲ್ಲೇನು ಮಜ? ಲಗಾಮು ಬಿಸಾಕಿ ಯಾವುದನ್ನೂ ನಿರ್ದೇಶಿಸದೆ ಆರಾಮವಾಗಿ ಸವಾರಿ ಮಾಡ್ಕೊಳ್ತಾ ಹೋಗ್ಬೇಕು. ಅದರ್‌ವೈಸ್ ನೋ ಥ್ರಿಲ್. ಅದರ ಗಮ್ಮತ್ತೇ ಬೇರೆ'- ತುಟಿಗಳನ್ನು ಬೆಲೂನು ಮಾಡುತ್ತಾಳೆ ವಿಚಿತ್ರ ಖುಷಿಯಿಂದ.

ಹಾಗೇ ಅವಳು ಇದ್ದಳೂ ಕೂಡ. ಅಂದರೆ ಸಡಿಲ ಜೀವನದಲ್ಲಿ ತೇಲಾಡುತ್ತಿದ್ದಳು ಅಂತಲ್ಲ. ಭಾವನೆಗಳ ಉಗ್ರಾಣವೇ ಅವಳು. ಆದರೆ ವಿಪರೀತ ಕಲ್ಪನೆಯ ಹಾರಾಟಕ್ಕೆ ಬ್ರೇಕ್ ಹಾಕಿದ್ದಳಷ್ಟೇ. ಭಾವನೆಗಳಿಗೇ ಒಂದು ಪ್ರತ್ಯೇಕ ಕೋಣೆ ಇತ್ತವಳಲ್ಲಿ. ಮನಬಂದಂತೆ ಅವು ಹಾರಾಡಲು ಸೀಮಿತ ಆವರಣ, ಹಾಗೂ ಕುಣಿಯುತ್ತ ಹೃದಯದ ಗೋಡೆಗಳಿಗೆ, ಢಿಕ್ಕಿ ಕೊಡುತ್ತಾ ಹೊರಬರುವ ಕದವನ್ನು ತಡವರಿಸುತ್ತಾ ದೆವ್ವದಂತೆ ಕುಣಿಯಬೇಕಷ್ಟೆ. ಬಾಗಿಲು ಬಂದ್!... ಒಮ್ಮೊಮ್ಮೆ ಸೋಲುವುದುಂಟು. ಹೊರಕಿಂಡಿಯನ್ನು ಕೆಲ ಗಳಿಗೆ ಸರಿಸಿ ರಪ್ಪನೆ ಮುಚ್ಚಿಬಿಡುತ್ತಾಳೆ. ಭಾವಕೋಶದಿಂದ ಅರ್ಧಂಬರ್ಧ ಹೊರಬಂದ ಕೆಲ ಭಾವನೆಗಳು ಚಟ್ಟನೆ ಅಪ್ಪಚ್ಚಿಯಾಗಿ ಹೋಳಾಗಿ ಜೋಲುತ್ತವೆ, ರಕ್ತವನ್ನು ಕಾರುತ್ತವೆ.

ಕಾಲೇಜಿನಲ್ಲಿದ್ದಾಗ ಅವಳು ಹೀಗೆ ಎಷ್ಟೊ ಬಾರಿ ಆಟವಾಡಿದ್ದುಂಟು. ಕೆಲವೊಮ್ಮೆ ಮೋಜೆನಿಸುತ್ತಿತ್ತು. ಅವಳು ಆಡಿಸಿದಂತೆ ಅವೂ ಕೂಡಾ ಎಷ್ಟೋ ಸಲ ಅವಳನ್ನೂ ಆಡಿಸಿವೆ. ಗೆಳತಿಯರ ಮಧ್ಯೆ ಕುಳಿತಾಗ ಅಂಥ ಮಾತುಗಳು ಏಳುತ್ತಿದ್ದವು. ಅವರಿವರು ತಮಗೆ ಮದುವೆ ಸೆಟಲ್ ಆದ ಬಗ್ಗೆ, ಇನ್ನು ಕೆಲವರು ತಮ್ಮ ಲವ್ ಅಫೇರ್‌ಗಳ ಬಗ್ಗೆ ಹೇಳಿದಾಗಲಂತೂ ಅವಳು ಹೆಣದಂತೆ ಸ್ವಲ್ಪ ಹೊತ್ತು ಕುಕ್ಕರಿಸುತ್ತಿದ್ದಳು. ಅಂಥ ಸುಂದರ ಗಳಿಗೆಗಳನ್ನು ದಕ್ಕುವಂತೆ ಮಾಡದ ತನ್ನ ಬಳಕು-ಬಿನ್ನಾಣವಿಲ್ಲದ ಬಿಗಿವ್ಯಕ್ತಿತ್ವದ ಬಗ್ಗೆ ಅವಳಿಗೆ ತನ್ನ ಮೇಲೆಯೇ ಕೋಪ ಸಿಡಿಯುತ್ತದೆ. ತಾನೆಂದೂ ಅನುಭವಿಸಿ ಗೊತ್ತಿರದ ಅವರುಗಳ ಸಂತೋಷದ ಭಾವ ಕಂಡು ಅಸೂಯೆ ಕುದಿಯುತ್ತದೆ. ತನಗ್ಯಾಕೆ ಇಂಥ ಸನ್ನಿವೇಶಗಳೇ ಒದಗಿಲ್ಲ ಎಂಬ ಮರುಕ ಅವಳನ್ನು ರುಬ್ಬುತ್ತದೆ.

ನಿಜ ಹೇಳುವುದಾದರೆ ಅವಳಿಗೆ ಅಂಥ ನಿಮಿಷಗಳೇ ಎದುರಾಗಿಲ್ಲ ಎಂದು ಅವಳು ಹೇಳಿದರೆ ಅದು ಶುದ್ಧ ಸುಳ್ಳು. ಅವಳ ಸುತ್ತುವರಿದ ಹುಡುಗರಿಗೆ ಅವಳು ಸ್ವಲ್ಪ ಸಲುಗೆ ಕೊಟ್ಟಿದ್ದರೂ ಸಾಕಿತ್ತು ಆ ರೀತಿಯ ರೊಮ್ಯಾಂಟಿಕ್ ಕ್ಷಣಗಳು ಅವಳನ್ನು ಮುತ್ತದಿರುತ್ತಿರಲಿಲ್ಲ. ತನಗೇಕೆ ಅಂಥ ಕ್ಷಣಗಳು ಎದುರಾಗಿಲ್ಲ ಎಂದು ಮರುಗುವುದಕ್ಕೆ, ತಾನೇ ಅದಕ್ಕೆ ಅವಕಾಶ ಕೊಟ್ಟಿಲ್ಲ, ಅದಕ್ಕೆ ತಾನೇ ಕಾರಣ ಎಂದವಳಿಗೆ ಗೊತ್ತಿಲ್ಲ. ವಾಸ್ತವವಾಗಿ, ಅವಳೇನು ಒಣಕಟ್ಟಿಗೆ ಗೊಂಬೆಯಲ್ಲ. ನೋಡುವವರು ಮತ್ತೊಮ್ಮೆ ಕಣ್ಣನ್ನು ಹೊರಳಿಸಿ ನೋಡುವಂಥ ಮುದ್ದಾದ ಮುಖ. ಎಷ್ಟೋ ಜನರು ಆಕರ್ಷಿತರಾಗಿ ಅವಳ ಸ್ನೇಹ ಬಯಸಿ ಬಂದದ್ದೂ ಉಂಟು. ನಿಮ್ಮನ್ನು ಪ್ರೀತಿಸುತ್ತೇನೆ ಎಂದದ್ದೂ ಉಂಟು. ಆಗ ಅವಳಿಗೆ ತಾನು ಹಿಂದೆ ಓದಿದ್ದ ಕಥೆ, ಕಾದಂಬರಿಗಳಲ್ಲಿನ ಮೊದಲನೋಟದ ಪ್ರೇಮ ಸಂದರ್ಭಗಳ ನೆನಪು ತಟ್ಟನೆ. ಅಷ್ಟೇ...ಆದರೆ ಅವಳಿಗೆ ಮಾತ್ರ ಯಾರಲ್ಲೂ ಪ್ರೀತಿ ಹುಟ್ಟಲೇ ಇಲ್ಲ! ಭಾವುಕತೆ ಸ್ಫುರಿಸಲೇ ಇಲ್ಲ. ಓಹ್ ಕಾದಂಬರಿಗಳಲ್ಲೇ